**OS. No 19/2019**
**P.W-1**

**( ದಿನಾಂಕ.15-11-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಮುಂದುವರೆದ ಪಾಟೀ ಸವಾಲುಃ** ಶ್ರೀ.S.S.C. ವಕೀಲರಿಂದ

ನನ್ನ ಮುಖ್ಯ ವಿಚಾರಣೆಯಲ್ಲಿ 5 ನೇ ಖಂಡಿಕೆಯಲ್ಲಿ ಸರ್ವೆ ನಂಬರ 27/3 ನ್ನು ಖರೇದಿಸಿದಾಗ 4 ಎಕರೆ 18 ಗುಂಟೆ ಇತ್ತು ಎಂದು ಬರೆಸಿರುತ್ತೇನೆ ಎಂದರೆ ಸರಿ. ಮೇಲೆ ಹೇಳಿದಂತೆ ಸರ್ವೆ ನಂಬರ ಜಮೀನದಲ್ಲಿ 4 ಎಕರೆ 18 ಗುಂಟೆ ಗುಡಾಮಬೀ ಹೆಸರಿನಲ್ಲಿ 1970 ರಲ್ಲಿ ಇತ್ತು ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿದ ಬಗ್ಗೆ ನನಗೆ ಗೊತ್ತಿಲ್ಲ . ಏಕೆಂದರೆ ನನ್ನ ತಂದೆಯವರೆ ಖರೀದಿ ಹಿಡಿದಿರುತ್ತಾರೆ ಎಂದು ನುಡಿಯುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಆ ಬಗ್ಗೆ ಮೊದಲಿನ ಪಹಣಿ ಆಧಾರದ ಮೇಲೆ ಬರೆಸಿರುತ್ತೇನೆ. ಆ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ನನ್ನ ತಂದೆ ದಾವಾ ಸ್ವತ್ತನ್ನು ಖರೀದಿಸಿದ ನಂತರ ಆತನ ಹೆಸರಿನಲ್ಲಿ ಮ್ಯೂಟೇಶನ ಆಗಿದೆ ಎಂದರೆ ಸರಿ. ಖರೀದಿ ಹಿಡಿದ ನಂತರ ಎಷ್ಟು ವರ್ಷಕ್ಕೆ ಮ್ಯೂಟೇಶನ ಆಗಿದೆ ಎಂದು ನನ್ನ ತಂದೆಗೆ ಗೊತ್ತು. ಸುಮಾರು 2-3 ವರ್ಷದಲ್ಲಿ ಆಗಿರಬಹುದು ಎಂದು ನುಡಿಯುತ್ತಾರೆ.

ಗುಡಮಾ ಬೀ ಹೆಸರಿನಲ್ಲಿ 4 ಎಕರೆ 18 ಗುಂಟೆ ಜಮೀನು ಇದ್ದರೂ ಕೂಡಾ ಗ್ರಾಮ ಲೆಕ್ಕಾಧಿಕಾರಿ ಇವರು ಮ್ಯೂಟೇಶನ ಮಾಡುವ ಸಮಯದಲ್ಲಿ 2 ಎಕರೆ 18 ಗುಂಟೆ ಮಾತ್ರ ಇದೆ ಎಂದು ಮ್ಯೂಟೇಶನ ಮಾಡಿದ್ದಾರೆಂದರೆ ನನ್ನ ತಂದೆಗೆ ಗೊತ್ತು

ಎಂದು ನುಡಿಯುತ್ತಾರೆ. ನನಗೆ 1978 ರಲ್ಲಿ ಸಾಮಾನ್ಯ ಜ್ಞಾನ ಇತ್ತು ಎಂದರೆ ಸರಿಯಲ್ಲ. ಗ್ರಾಮ ಲೆಕ್ಕಾಧಿಕಾರಿ ತಪ್ಪು ಮ್ಯೂಟೇಶನ ಮಾಡಿರುತ್ತಾರೆಂದು ಕಂದಾಯ ಇಲಾಖೆಯ ಮೇಲಾಧಿಕಾರಿಗಳಿಗೆ ಯಾವುದೇ ಮೇಲ್ಮನವವಿಯನ್ನು ನಾನು ಮತ್ತು ನನ್ನ ತಂದೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಸದರಿ ಗ್ರಾಮ ಲೆಕ್ಕಾಧಿಕಾರಿ ಮ್ಯೂಟೇಶನ ಮಾಡಿದ ನಮಗೆ ಆ ಸಮಯದಲ್ಲಿ ಗೊತ್ತಿತ್ತು ಎಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಂಡು 12-15 ವರ್ಷ ಆಗಿರುತ್ತದೆ. ಈ ಪ್ರಕಾರ ಮ್ಯೂಟೇಶನ ಆಗಿದ್ದು ನನ್ನ ತರೆದೆಗೆ ಆವಾಗಲೇ ಗೊತ್ತಿತ್ತು ಎಂದರೆ ಸರಿಯಲ್ಲ.

ಈ ಕೇಸು ಮಾಡುವ ಮೊದಲು ಯಾವ್ಯಾವ ದಾಖಲೆಗಳು ಯಾವ ವರ್ಷದಲ್ಲಿ ಆಗಿರುತ್ತವೆ ಹಾಗೂ ಎಷ್ಟೆಷ್ಟು ಇವೆ ಎಂದು ನಾವು ಕೂಲಂಕೂಷವಾಗಿ ಪರಿಶೀಲಿಸಿರುತ್ತೇವೆ. ದಾವಾ ಮಾಡುವ ಮುಂಚೆ ದಾವಾ ಸ್ವತ್ತಿನ ಪಹಣಿ 4 ಎಕರೆ 18 ಗುಂಟೆ ಇರುವ ಬಗ್ಗೆ ಪರಿಶೀಲನೆ ಮಾಡಿದ್ದಿರಾ? ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಕ್ರಯಪತ್ರ ಪ್ರಕಾರ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. 1978 ರಲ್ಲಿ ದಾವಾ ಸ್ವತ್ತಿನ ಪಹಣಿ ನನ್ನ ತಂದೆ ಹೆಸರಿನಲ್ಲಿ 2 ಎಕರೆ 18 ಗುಂಟೆ ಇದೆ ಎಂದರೆ ಸರಿ. ಸಾಕ್ಷಿಗೆ 1978 ರಿಂದ 1983 ರ ವರೆಗಿನ ಪಹಣಿಯನ್ನು ತೋರಿಸುತ್ತಿದ್ದು ಒಪ್ಪಿದ ಮೇರೆಗೆ ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರಲ್ಲಿ ನನ್ನ ತಂದೆ ಹೆಸರಿನಲ್ಲಿ 2 ಎಕರೆ 18 ಗುಂಟೆ ಮಾತ್ರ ಇದೆ ಎಂದರೆ ಸರಿ. ನನ್ನ ತಂದೆ ಜೀವಂತ ಇರುವ ಕಾಲಕ್ಕೆ ನಮ್ಮ ಎಲ್ಲರ ಹೆಸರಿನಲ್ಲಿ ಪಹಣಿ ಮಾಡಿಕೊಟ್ಟಿರುತ್ತಾರೆ.

ನನ್ನ ತಂದೆ ಯಾವ ದಾಖಲೆ ಮುಖಾಂತರ ನಮ್ಮ ಹೆಸರಿನಲ್ಲಿ ಪಹಣಿ ಮಾಡಿಕೊಟ್ಟಿರುತ್ತಾರೆಂದು ತೋರಿಸಲು ನ್ಯಾಯಾಲಯಕ್ಕೆ ಪಹಣಿ ಕೊಟ್ಟಿರುವುದಿಲ್ಲ. ನನ್ನ ತಂದೆ ನಮ್ಮ ಹೆಸರಿನಲ್ಲಿ ಪಹಣಿ ಮೇಲೆ ಮಾತ್ರ ಹಂಚಿಕೊಟ್ಟಿರುತ್ತಾರೆ. ಆದರೆ ಯಾವುದೇ ದಾಖಲೆಯನ್ನು ಮಾಡಿಕೊಟ್ಟಿಲ್ಲ. ನಾನು ಮತ್ತು ನನ್ನ ತಂದೆ ಕೂಡಿ ಪಹಣಿಯಲ್ಲಿ 2 ಎಕರೆ 18 ಗುಂಟೆ ಇದ್ದುದನ್ನು ತಿದ್ದುಪಡಿ ಮಾಡಿ 4 ಎಕರೆ 18 ಗುಂಟೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ತಿದ್ದುಪಡಿಗೆ ಸಂಬಂಧಪಟ್ಟ ಕಂದಾಯ ಇಲಾಖೆಯ ಅಧಿಕಾರಿಗಳ ಸಹಿ ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಹೆಸರಿನಲ್ಲಿ 2 ಎಕರೆ 18 ಗುಂಟೆ ಇದ್ದುದ್ದನ್ನು ನಮ್ಮ ಹೆಸರಿನಲ್ಲಿ ಮಾಡುವಾಗ ತಿದ್ದುಪಡಿ ಮಾಡಿ 4 ಎಕರೆ 18 ಗುಂಟೆ ಮಾಡಿದ್ದಾರೆ ಎಂದರೆ ಸರಿ.

ಪ್ರತಿವಾದಿ ಮತ್ತು ಅವಳ ವಾರಸುದಾರರು ಮಮದಾಪುರ ಗ್ರಾಮದಲ್ಲಿ ಇರುವುದಿಲ್ಲ. ನೆಲ್ಲೂರಿನಲ್ಲಿ ಇರುತ್ತಾರೆ ಎಂದರೆ ಸರಿ. ಪ್ರತಿವಾದಿಯ ಜಮೀನು ಮಮದಾಪುರ ಗ್ರಾಮದಲ್ಲಿ ಇರುತ್ತದೆ. ಪ್ರತಿವಾದಿ ತನ್ನ ಜಮೀನನ್ನು ಲಾವಣಿ ಮೇರೆಗೆ ಕೊಟ್ಟಿರುತ್ತಾರೆಂದರೆ ಸರಿ. ಪ್ರತಿವಾದಿ ಮತ್ತು ಅವಳ ವಾರಸುದಾರರು ಊರಲ್ಲಿ ಇರದೇ ಇರುವ ಕಾರಣ ನಾವು ಅವರ ಜಮೀನನ್ನು ಒತ್ತುವರಿ ಮಾಡಲು ಪ್ರಯತ್ನ ಪಟ್ಟು 4 ಎಕರೆ 18 ಗುಂಟೆ ಮಾಡಬೇಕೆಂಬ ಉದ್ದೇಶದಿಂದ ಈ ಸುಳ್ಳು ದಾವೆ ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ.

ನಾವು ಮತ್ತು ಪ್ರತಿವಾದಿ ಕೂಡಿ ದಾವಾ ಸ್ವತ್ತನ್ನು ಅಳತೆ ಮಾಡಿರುತ್ತೇವೆ. ಸುಮಾರು 2 ವರ್ಷದ ಹಿಂದೆ ಈ ರೀತಿ ಅಳತೆ ಮಾಡಿರುತ್ತೇವೆ. ಆ ಬಗ್ಗೆ ದಾಖಲೆಗಳನ್ನು ನಾನು ತೆಗೆದುಕೊಂಡಿಲ್ಲ. ಅಳತೆ ಮಾಡಿದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸರ್ವೇ ಇಲಾಖೆಗೆ ಹೋಗಿ ಅಳತೆ ದಾಖಲೆ ಕೊಡಿ ಎಂದು ಅರ್ಜಿ ಕೊಟ್ಟಿಲ್ಲ. ನಾವು ದಾವಾ ಸ್ವತ್ತನ್ನು ಅಳತೆ ಮಾಡಿಸಿರುತ್ತೇವೆ ಹಾಗೂ ಆಗ ನಮ್ಮ ಜಮೀನು 4 ಎಕರೆ 18 ಗುಂಟೆ ಇರುತ್ತದೆ ಎಂದು ಕಂಡು ಬಂದಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಮ್ಮ ಮಾರಾಟಗಾರರಾದ ಗುಡಮಾಬೀಗೆ ವಾರಸುದಾರರು ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಆದರೆ ಪ್ರತಿವಾದಿ ಅವರ ಸಂಬಂಧಿಕರಾಗಬೇಕು. ನಾವು ದಾವಾ ಸ್ವತ್ತಿನ 4 ಎಕರೆ 18 ಗುಂಟೆಯ ಸ್ವಾಧೀನದಲ್ಲಿ ಇರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಗುಡಮಾಬೀಗೆ 2 ಎಕರೆ 18 ಗುಂಟೆ ಮಾತ್ರ ಇತ್ತು ಅಷ್ಟೆ ಕಬ್ಜೆಯನ್ನು ನಮಗೂ ಕೂಡಾ ನೀಡಿರುತ್ತಾಳೆಂದರೆ ಸರಿಯಲ್ಲ. ಪ್ರತಿವಾದಿಯ ಜಮೀನನ್ನು ಹೊಡೆಯುವ ಉದ್ದೇಶದಿಂದ 4 ಎಕರೆ 18 ಗುಂಟೆ ವಿಸ್ತೀರ್ಣವನ್ನು ಕ್ರಯಪತ್ರದಲ್ಲಿ ತೋರಿಸಿರುತ್ತೇವೆ ಎಂದರೆ ಸರಿಯಲ್ಲ. ಸರ್ವೇ ನಂಬರ 27 ರಲ್ಲಿ ಪ್ರತಿವಾದಿ ಜಮೀನು ಇರುತ್ತದೆ. ಪ್ರತಿವಾದಿ ಜಮೀನು ಎಷ್ಟು ಇದೆ ನನಗೆ ಗೊತ್ತಿಲ್ಲ. ಪ್ರತಿವಾದಿಗೆ ದಾವಾ ಸ್ವತ್ತಿನ ಸರ್ವೇ ನಂಬರದಲ್ಲಿ 4 ಎಕರೆ 15 ಗುಂಟೆ ಜಮೀನು ಇದೆ ಎಂದರೆ ಸರಿ.

**OS. No 19/2019**
**P.W-1**

ದಾವಾ ಸ್ವತ್ತನ್ನು ಅಳತೆ ಮಾಡಲು ನಾನು ಹಣ ಕೊಟ್ಟಿರುತ್ತೇನೆ. ಸರ್ವೇ ನಂಬರ 27 ಒಟ್ಟಾಗಿ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಗೆ 4 ಎಕರೆ 15 ಗುಂಟೆ ಜಮೀನು ತನ್ನ ಗಂಡನ ಕಡೆಯಿಂದ ಬಂದಿದೆ ಎಂದರೆ ಸರಿ. ದಾವಾ ಸ್ವತ್ತಿನ ಚೆಕ್ಕಬಂದಿ ಕೂಡಾ ತಪ್ಪಾಗಿ ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಉತ್ತರಕ್ಕೆ ಇಮಾಮ ಮುಲಾನ ಜಮೀನು ಇದೆ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಯ ಜಮೀನನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಚೆಕ್ಕಬಂದಿ ತೋರಿಸಿ ಸುಳ್ಳು ಕ್ರಯ ಪತ್ರ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಜಮೀನು 2 ಎಕರೆ 18 ಗುಂಟೆ ಇದೆ ಎಂದು ತಹಶೀಲ್ದಾರವರು ಅಳತೆಯಾದ ನಂತರ ನಮಗೆ ದಾಖಲೆ ಕೊಟ್ಟಿರುತ್ತಾರೆಂದರೆ, ಸಾಕ್ಷಿ ಪ್ರತಿವಾದಿ ಹಣ ಕೊಟ್ಟು ಮಾಡಿಸಿರುತ್ತಾರೆಂದು ನುಡಿಯುತ್ತಾರೆ. ಪ್ರತಿವಾದಿಯರು ನಮ್ಮ ಜಮೀನಿಗೆ ಯಾವತ್ತು ತೊಂದರೆ ಕೊಟ್ಟಿಲ್ಲ ಎಂದರೆ ಸರಿ.

ತಹಶೀಲ್ದಾರವರು ನಮ್ಮ ಹೆಸರಿನಲ್ಲಿ 2 ಎಕರೆ 18 ಗುಂಟೆ ದಾವಾ ಸ್ವತ್ತಿನಲ್ಲಿ ಇದೆ ಎಂದು ಆದೇಶ ಮಾಡಿರುತ್ತಾರೆ ಎಂದರೆ ಸಾಕ್ಷಿ ಹಣ ಕೊಟ್ಟು ಆ ರೀತಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಾವು 2 ಎಕರೆ 18 ಗುಂಟೆ ಜಮೀನದಲ್ಲಿ ಕಬ್ಜೆ ಇದ್ದುದ್ದನ್ನು ನೋಡಿ ಆದೇಶ ಮಾಡಿರುತ್ತಾರೆಂದರೆ ಸರಿಯಲ್ಲ.

**OS. No 19/2019**
**P.W-1**

ನಾವು ಪ್ರತಿವಾದಿ ಜಮೀನನ್ನು ಹೊಡೆಯಬೇಕು ಎಂಬ ಉದ್ದೇಶದಿಂದ ಹಾಗೂ ನಮ್ಮ ಜಮೀನನ್ನು 4 ಎಕರೆ 18 ಗುಂಟೆ ಜಮೀನನ್ನು ಭರ್ತಿ ಮಾಡಬೇಕೆಂಬ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-3 ರಲ್ಲಿರುವ ಜಮೀನು ದಾವಾ ಸ್ವತ್ತು ಅಲ್ಲ ಎಂದರೆ ಸರಿಯಲ್ಲ. ನಿಪಿ-3 ನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಆಳಂದ**